ಶ್ರೀ ಎಸ್. ಎಂ. ಯಹ್ಯ.—ನಿಮ್ಮಲ್ಲಿ ಯಾವುದೋ ಇರಲಿ, ಸತ್ಯ ಏನೆಂದು ಬಹಿರಂಗಕ್ಕೆ ಬರಬೇಕಲ್ಲ.

ಅಧ್ಯಕ್ಷರು.—ಬೌರಿಂಗ್ ಆಸ್ಪತ್ರೆಯಲ್ಲಿ ಸ್ಪೆಷಲ್ ಹೈಟೆನ್‌ಶನ್ ಕನೆಕ್ಷನ್ ಕೊಡಲಾಗಿದೆ ಎಂಬ ಹೊಸ ಸಿಸ್ಟಮ್ ಎಂದು, ತಾವು ಖುದ್ದಾಗಿ ಹೋಗುವುದಾಗಿ ಸಚಿವರು ಹೇಳಿರುವುದರಿಂದ.....

ಶ್ರೀ ಎಸ್. ರವೀಶ್.—ಇವರ ಆಫೀಸರ್ಸ್ ಒಂದು ರಿಪೋರ್ಟ್ ಹಾಕಿದ್ದಾರೆ, ಯಾವ ರೀತಿ ಮಾಡಿದರೆ ಸರಿಯಾಗುತ್ತದೆಂದು ಅದನ್ನೆಲ್ಲ ನಾನು ಹೇಳತೊಡಗಿದರೆ ಮತ್ತೆ ಕಡತದಿಂದ ತೆಗೆಯುವ ಪದ ಬಳಸಬೇಕಾಗುವುದು. ಆದ್ದರಿಂದ ಅವರು ಖುದ್ದಾಗಿ ಹೋಗಿ ಪರಿಶೀಲಿಸಲಿ.

SRI S. M. YAHYA.—I will certainly look into it.

ಶ್ರೀ ಟಿ. ಬಿ. ಜಯಚಂದ್ರ—ಪ್ರಶ್ನೆ ಸಂಖ್ಯೆ ೪೭೦

ಕರ್ನಾಟಕದಲ್ಲಿ ಗ್ರಾನೈಟ್ ಹೊರತೆಗೆಯುವ ಬಗ್ಗೆ

೧೪೧೯. ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ನಿರ್ವಹಿಸಿರುವ ದಾಖಲೆಗಳ ಪ್ರಕಾರ ಕಳೆದ ೫ ವರ್ಷಗಳಲ್ಲಿ ಕೆಂಪು ಅಥವಾ ಗುಲಾಬಿ, ಬೂದು ಮತ್ತು ಕಪ್ಪು ಶಿಲೆಗಳಂತಹ ಕಲ್ಲು ಗಣಿಗಳಿಂದ ಉತ್ಪಾದನಾ ಪ್ರಮಾಣ ಎಂತ? ಸರ್ಕಾರವು ಪಡೆದಿರುವ ರಾಜಧನ;

ಆ) ಮಂಗಳೂರು ಬಂದರಿನಲ್ಲಿ ನಿರ್ವಹಿಸಿರುವ ದಾಖಲೆಗಳಂತೆ ಕಾರ್ಖಾನೆಗಳ ಮುಖಾಂತರ ಸಿದ್ಧಪಡಿಸಿದ ಕಲ್ಲುಗಳನ್ನು ರಫ್ತು ಮಾಡಿರುವ ಪ್ರಮಾಣದ ವಿವರ,

ಇ) ಸರ್ಕಾರಕ್ಕೆ ರಫ್ತುದಾರರಿಂದ ರಾಜಧನ ಎಂಚಿತವಾಗುತ್ತಿರುವುದು ತಿಳಿದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಂಸದೀಯ ವ್ಯವಹಾರಗಳು ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು).—

(ಅ) (೧) ೫ ವರ್ಷಗಳಲ್ಲಿ ಕೆಂಪು ಅಥವಾ ಗುಲಾಬಿ, ಬೂದು ಮತ್ತು ಕಪ್ಪು ಶಿಲೆಗಳಂತಹ ಕಲ್ಲು ಗಣಿಗಳಿಂದ ಉತ್ಪಾದನಾ ಪ್ರಮಾಣ ಮತ್ತು ಸರ್ಕಾರವು ಪಡೆದಿರುವ ರಾಜಧನವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:—

ವರ್ಷಗಳು	ಕೆಂಪು ಕಲ್ಲು		ಕಪ್ಪು ಕಲ್ಲು		ಬೂದು ಕಲ್ಲು	
	ಉತ್ಪಾದನೆ ಟನ್ನುಗಳಲ್ಲಿ	ವಸೂಲಾದದ್ದು ಲಕ್ಷಗಳಲ್ಲಿ	ಉತ್ಪಾದನೆ ಟನ್ನುಗಳಲ್ಲಿ	ವಸೂಲಾದದ್ದು ಲಕ್ಷಗಳಲ್ಲಿ	ಉತ್ಪಾದನೆ ಟನ್ನುಗಳಲ್ಲಿ	ವಸೂಲಾದದ್ದು ಲಕ್ಷಗಳಲ್ಲಿ
೧೯೮೫	ಅಲಂಕಾರಿಕ ಶಿಲೆಯ ಒಟ್ಟು ಪ್ರಮಾಣ—೧೩೫೫೬೧ ಟನ್ನುಗಳು ಉಪಖನಿಜಗಳಿಂದ ಗ್ರಾನೈಟೂ ಸೇರಿ ಪಡೆದಿರುವ ರಾಜಧನ—೧೮೬.೯೪ ಲಕ್ಷಗಳು					
೧೯೮೬–೮೭	೬೫,೨೪೮	೨೬.೩೪	೩೪,೯೭೮	೯.೧೧	೧೧.೯೫೫	೩.೫೮
೧೯೮೭–೮೮	೪೧.೪೨೧	೩೧.೩೨	೨೨,೫೩೭	೯.೦೧	೩೮.೪೫೪	೧೭.೮೩
೧೯೮೮–೮೯	೪೮.೧೭೩	೩೩.೧೦	೭,೫೪೮	೩.೦೧	೩೧,೩೮೬	೧೪.೮೯
೧೯೮೯–೯೦	೪೯,೨೮೨	೪೧.೯೯	೨,೦೪೦	೮.೮೧	೩೫,೦೫೫	೧೪.೧೨

(ಆ) ಪುಂಗಳೂರು ಬಂದರಿನಿಂದ ರಫ್ತು ಮಾಡಿದ ಗ್ರಾನೈಟಿನ ಪ್ರಮಾಣ, ತಮಿಳುನಾಡು ಮತ್ತು ಆಂಧ್ರ ಪ್ರದೇಶದಿಂದ ಬಂದ ಗ್ರಾನೈಟು ಸೇರಿದ ವಿವರ:—

೧೯೮೪–೮೫	೨,೯೨,೦೦೦	ಟನ್ನುಗಳಲ್ಲಿ
೧೯೮೫–೮೬	೨,೪೬,೫೦೦	ಟನ್ನುಗಳಲ್ಲಿ
೧೯೮೬–೮೭	೩,೧೬,೦೦೦	ಟನ್ನುಗಳಲ್ಲಿ
೧೯೮೭–೮೮	೩,೭೭ ೦೦೦	ಟನ್ನುಗಳಲ್ಲಿ
೧೯೮೮–೮೯	೧೪,೭೦,೧೬೫	ಟನ್ನುಗಳಲ್ಲಿ

(೨) ಗಮನಕ್ಕೆ ಬಂದಿದೆ.—

ಕರ್ನಾಟಕದ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಪಟ್ಟಾದಾರರು ಮತ್ತು ಇತರರು ಕಲ್ಲು ಗಣಿ ಕಾರ್ಯ ನಿರ್ವಹಿಸುವುದನ್ನು ತಡೆಯದಂತೆ ಪ್ರಾಧಿಕಾರಿಗಳಿಗೆ ಆದೇಶಿಸಿರುವುದರಿಂದ ಸದರಿ ಪಟ್ಟಾದಾರರು ಕಾರ್ಯನಿರ್ವಹಿಸಲು ಸಾಧ್ಯವಾಯಿತು. ನಂತರ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಗಣಿ ಚಟುವಟಿಕೆ ನಿರ್ವಹಿಸುತ್ತಿದ್ದ ಎಲ್ಲಾ ಪಟ್ಟಾದಾರರಿಗೂ ಕಲ್ಲು ಗಣಿಯಿಂದ ತೆಗೆದಿರುವ ಗ್ರಾನೈಟಿಗೆ ರಾಜಧನ ಬಾಕಿ ಪಾವತಿ ಮಾಡಲು ನೋಟೀಸ್ ಜಾರಿ ಮಾಡಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ.—ನನ್ನ ಪ್ರಶ್ನೆ ಏನೆಂದರೆ, ೫ ವರ್ಷದಲ್ಲಿ ಎಷ್ಟು ನಿಮಗೆ ಮೋಸ ವಾಗಿದೆ ಎಂಬುದನ್ನು ತಿಳಿಸಬೇಕು. ಎರಡನೆಯದಾಗಿ, ತಪ್ಪು ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ,

> "This is due to interim orders granted in various writ petitions filed by the pattadars and others by the High Court restraining the authorities not to interfere with the quarrying activities and allowing petitioners to carry on the quarrying activities".

ನೀವು ಅವರಿಗೆ ಇಂಟರ್‌ಫಿಯರ್ ಮಾಡಬೇಡಿ ಎಂದು ಹೇಳಿದರೇ ವಿನಹ ರಾಯಲ್ಟಿ ಕಲೆಕ್ಟ್ ಮಾಡಬೇಡಿ ಎಂದು ಹೇಳಲಿಲ್ಲ.
ಮೂರನೆಯ ಪ್ರಶ್ನೆ ಏನೆಂದರೆ,

> "The Department of Mines and Geology has issued a notice to all Pattaders who have obtained stay orders from the High Court to pay the royalty due on the quarried granite".

ಸ್ವಾಮಿ, ತಾವು ನೋಟೀಸ್ ಕೊಟ್ಟಿರುವುದು ಪಟ್ಟಾದಾರರಿಗೆ, ಪಟ್ಟಾದಾರರು ಊರಿನಲ್ಲಿಯೇ ಇದ್ದಾರೆ. ನೀವು ನೋಟೀಸ್ ಕೊಡಬೇಕಾಗಿರುವುದು ಎಕ್ಸ್‌ಪೋರ್ಟರ್ಸ್‌ಗೇ ವಿನಃ ಪಟ್ಟಾದಾರರಿಗಲ್ಲ. ನೀವು ಇವರಿಗೆ ನೋಟೀಸ್ ಕೊಟ್ಟಿರತಕ್ಕಂಥಾದ್ದು ಸರಿಯಾಗಿ ಇದೆಯೇ, ಯಾವಾಗ ಕೊಟ್ಟಿರಿ, ಈ ಮೂರು ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡಿ ಸ್ವಾಮಿ.

ಶ್ರೀ ಎಂ ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಪಟ್ಟಾಭೂಮೀಯಲ್ಲಿ ಕ್ವಾರಿ ಮಾಡ ಬೇಕಾದರೆ ಲೈಸೆನ್ಸ್ ತೆಗೆದುಕೊಂಡೇ ಮಾಡಬೇಕೆಂದು ನಮ್ಮ ಕಾನೂನಿನಲ್ಲಿ ಇದೆ. ಆದರೆ ಕೆಲವು ಪಟ್ಟಾದಾರರು ಮತ್ತು ಗ್ರಾನೈಟ್ ಬಿಸಿನೆಸ್ ಮಾಡುವವರು ಕೋರ್ಟಿಗೆ ಹೋಗಿ ಡಬ್ಲ್ಯು.ಪಿ. [illegible] ದಿನಾಂಕ ೧೪-೭-೮೭ರಲ್ಲಿ ಒಂದು ಹುಕುಮ್ ತೆಗೆದುಕೊಂಡಿದ್ದಾರೆ. ಕೋರ್ಟ್ ಆದೇಶದ ಪ್ರಕಾರ ಪಟ್ಟಾದಾರರುಗಳಿಗೆ ಕ್ವಾರಿ ಮಾಡುವುದಕ್ಕೆ ಅಧಿಕಾರಿಗಳು ಯಾವರೀತಿ ತೊಂದರೆ ಮಾಡಬಾರದೆಂದು ಅವರು ಆರ್ಡರ್ ಪಡೆದುಕೊಂಡಿದ್ದಾರೆ. ಅವರ ಮೇಲೆ ಎಸ್.ಎಲ್.ಪಿ. ಸುಪ್ರೀಂಕೋರ್ಟಿಗೆ ದಾಖಲ್ ಮಾಡಿದಾಗ ಅಲ್ಲೂ ಕೂಡಾ it is left to the authorities to restrain or whatever they want to do. ಅವರು ಲೈಸನ್ಸ್ ಬಗ್ಗೆ ಹೇಳಲಿಲ್ಲ. ರಾಯಲ್ಟಿ ಬಗ್ಗೆ ಹೇಳುವುದಾದರೆ, ನಾವು ೮೨ ಜನ ಪಟ್ಟಾದಾರರಿಗೆ ರಾಯಲ್ಟಿ ಕೊಡಬೇಕೆಂದು ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ. ಇದರ ಬಗ್ಗೆಯೇ ಗೊಂದಲ ಇರತಕ್ಕದ್ದು. ನಾವು ರಾಯಲ್ಟಿ ಕೊಡಬೇಕಾಗಿಲ್ಲ, ಪಟ್ಟಾಲ್ಯಾಂಡ್ ನಮ್ಮದೇ ಸ್ವಂತ ಹಕ್ಕು ಎಂದು ಅವರು ಹೇಳುತ್ತಿದ್ದಾರೆ. ಇದರಲ್ಲಿ ಸ್ವಲ್ಪ ಗೊಂದಲ ಇದೆ. between various court judgements. ಅದಕ್ಕೆ ಈಗಾಗಲೆ ನಾವು ಅಡ್ವೋಕೇಟ್ ಜನರಲ್‌ಗೆ ಹೇಳಿದ್ದೇವೆ. ಈ ವಿಷಯವನ್ನು ಕೋರ್ಟಿನಲ್ಲಿ ತೆಗೆದುಕೊಂಡು ಇದರ ಬಗ್ಗೆ ಅನಿರ್ದಿಷ್ಟ ನಿರ್ಣಯವನ್ನು ಕೋರ್ಟಿನಿಂದ ಕೊಡಿಸಬೇಕೆಂದು ಕೇಳಿಕೊಂಡಿದ್ದೇವೆ. ಅದು ಬಂದಾಗ ಬಹುಶಃ ಈ ಗೊಂದಲವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಎಕ್ಸ್‌ಪೋರ್ಟರ್ಸ್‌ಗೆ ಏತಕ್ಕೆ ನೋಟೀಸ್ ಕೊಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರ ಆಕ್ಷೇಪ ಏನೆಂದರೆ, ನೀವು ಗ್ರಾನೈಟ್ ಬಿಸಿನೆಸ್‌ನವರಿಗೆ ನೋಟೀಸ್ ಕೊಡಬೇಕಾಗಿತ್ತು, ಪಟ್ಟಾದಾರರಿಗೆ ಏತಕ್ಕೆ ಕೊಟ್ಟಿದ್ದೀರಿ ಎಂಬುದು. ಪಟ್ಟಾದಾರರು ಅವರ ಭೂಮಿಯಲ್ಲಿ ಇರುವುದರಿಂದ ಗ್ರಾನೈಟ್ ತೆಗೆದ ಬಗ್ಗೆ ಅವರಿಗೆ ಏತಕ್ಕೆ ನೋಟೀಸ್ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದಾರೆ. ಇದರಲ್ಲಿ ಸ್ವಲ್ಪ ಕಾನೂನಿನ ಗೊಂದಲ ಇದೆ. ಆದ್ದರಿಂದ ಈಗಾಗಲೇ we have taken up this matter with the High Court.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ತಾವು ನಮ್ಮ ನೆರವಿಗೆ ಬರಬೇಕು. ನಮ್ಮ ಸರಕಾರ ಎಕ್ಸೈಸ್ ಲಾಬಿಗೇ ಈಲ್ಡ್ ಆಗದೆ ಇರುವ ಪಟ್ಟಕ್ಕೆ ನಡೆದುಕೊಂಡಿತು. ಇದರಲ್ಲಿ ರೆವಿನ್ಯೂ ಆಸ್ಪೆಕ್ಟ್ ಇದೆ. ಸರಕಾರಕ್ಕೆ ಬರುವ ಹಣವನ್ನು ಎಕ್ಸ್‌ಪೋರ್ಟರ್ಸ್‌ನಿಂದ ಕಲೆಕ್ಟ್ ಮಾಡಿಕೊಳ್ಳಬೇಕಾಗಿತ್ತು ಎಂದರೆ ಈ ರೀತಿ ಉತ್ತರ ಹೇಳಿದ್ದಾರೆ. ಈ ಹಾರಿಕೆ ಉತ್ತರದಿಂದ ನನಗೆ ಸಮಾಧಾನ ವಾಗಿಲ್ಲ. ಐದು ವರ್ಷಗಳಲ್ಲಿ ಎಷ್ಟು ಮೋಸವಾಗಿದೆ ಎಂದು ಕೊಟ್ಟಿದ್ದಾರೆ. ಟನ್ ಲೆಕ್ಕದಲ್ಲಿ

ಕೊಟ್ಟಿದ್ದಾರೆ. ಅಮೌಂಟ್ ಗೊತ್ತಿಲ್ಲ. ಐದು ವರ್ಷಗಳಲ್ಲಿ ಎಷ್ಟು ಹಣ ಮೋಸವಾಗಿದೆ ಎನ್ನುವುದನ್ನು ಹೇಳಬೇಕು. ಮತ್ತೆ ಹೈಕೋರ್ಟ್ ಆರ್ಡರ್ ಇದ್ದರೂ ಕೂಡಾ, ಅದರಲ್ಲಿ ರಾಯಲ್ಟಿ ಕಲೆಕ್ಟ್ ಮಾಡಬಾರದೆಂದು ಹೇಳಿಲ್ಲ. ಇದರಲ್ಲಿ ಇಂಟರ್‌ಫಿಯರ್ ಮಾಡಬಾರದೆಂದು ಮಾತ್ರ ಹೇಳಿ ಬಹುದು. ಮಂಗಳೂರ್ ಬಂದರಿಗೆ ಹೋದಂಥ ಗ್ರಾನೈಟ್ ಬಗ್ಗೆ ರಾಯಲ್ಟಿ ಏತಕ್ಕೆ ಕಲೆಕ್ಟ್ ಮಾಡಲಿಲ್ಲ? ಮೂರನೆಯ ಪ್ರಶ್ನೆ ಎಂದರೆ, ತಾವು ಎಕ್ಸ್‌ಪೋರ್ಟರ್ಸ್‌ಗೆ ಮತ್ತೆ ಇವರಿಗೆ ನೋಟೀಸ್ ಕೊಟ್ಟಿದ್ದೀರಿ. ಇದರಲ್ಲಿ ವಿವಾದ ಇದೆ, ಅದನ್ನು ಮಾಡಿ. ಮಂಗಳೂರಿಗೆ ಗ್ರಾನೈಟ್ಸ್ ಹೋದಂಥ ಸಂದರ್ಭದಲ್ಲಿ ಏತಕ್ಕೆ ರಾಯಲ್ಟಿ ವಸೂಲಿ ಮಾಡಲಿಲ್ಲ ಹಾಗೂ ಏತಕ್ಕೆ ಇದನ್ನು ತಡೆಗಟ್ಟಲಿಲ್ಲ. ಇದರಲ್ಲಿ ಎಷ್ಟು ಮೋಸವಾಗಿದೆ ಎಂಬುದನ್ನು ಖಚಿತವಾಗಿ ಹೇಳಬೇಕು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲೇ ಬೇಕೆಂದು ನಾನು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲಿ ಎಕ್ಸ್‌ಪೋರ್ಟರ್ಸ್ ಅವರ ಲೆಸ್ಸೀಸ್‌ಗಳಲ್ಲ. We can collect only from the authorised lessees. ಪಟ್ಟಾದಾರರಿಗೆ ಎರಡು ತಿಂಗಳ ಹಿಂದೆ ನಾವು ನೋಟೀಸ್ ಕೊಟ್ಟಿದ್ದೇವೆ. ಅವರಿಂದ ವಸೂಲಿ ಮಾಡುವುದಕ್ಕೆ ಬರುತ್ತದೆಯೇ ಹೊರತು ಎಕ್ಸ್‌ಪೋರ್ಟರ್‌ಗಳಿಂದ ವಸೂಲು ಮಾಡುವುದಕ್ಕೆ ಬರುವುದಿಲ್ಲ. ಯಾರಾದರೂ ಇಲ್ಲೀಗಲ್ ಆಗಿ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಅವರ ಮೇಲೆ ಅಕ್ಷನ್ ತೆಗೆದುಕೊಂಡಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ.—ತಾವು ಉತ್ತರ ಕೊಟ್ಟಿದ್ದೀರಿ. ಐದು ವರ್ಷದಲ್ಲಿ ಎಷ್ಟು ಕಳುಹಿಸಿದ್ದಾರೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಚೆನ್ನಾಗಿದೆ.

ಅಧ್ಯಕ್ಷರು.—ಚೆನ್ನಾಗಿ ಇದೆಯಾ ?

ಶ್ರೀ ಟಿ. ಬಿ. ಜಯಚಂದ್ರ.—ಚೆನ್ನಾಗಿದೆ ಎಂದರೆ ಸರಕಾರದವರು ನನ್ನ ಪ್ರಶ್ನೆಯನ್ನು ಅಪ್ರಿಷಿಯೇಟ್ ಮಾಡಬೇಕು. ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರ ಲೆಕ್ಕದಲ್ಲಿ ಮಂಗಳೂರಿನಿಂದ ಎಷ್ಟು ಗ್ರಾನೈಟ್ ಎಕ್ಸ್‌ಪೋರ್ಟ್ ಆಗಿದೆ ಎಂದು ಗೊತ್ತಾಗಿದೆ. ಇದನ್ನು ನೋಡಿದರೆ ಎಷ್ಟು ರಾಯಲ್ಟಿ ಬರಬೇಕಾಗಿತ್ತು ಎಂಬುದು ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಚಂದ್ರ ಅವರ ಪ್ರಶ್ನೆಗೆ ಉತ್ತರ ನೀಡಿದ್ದೇನೆ ಇದರಲ್ಲಿ ಮಂಗಳೂರಿನಲ್ಲಿ ಎಷ್ಟು ರಫು ಆಗಿದೆ ಎಂದು ಕೇಳಿದ್ದಾರೆ ನಾನು ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ನಿರ್ವಹಿಸಿದ ದಾಖಲಾತಿಯಿಂದ ೫ ವರ್ಷಗಳಲ್ಲಿ ಎಷ್ಟು ಉತ್ಪಾದನೆ ಆಗಿದೆ, ಸರ್ಕಾರ ಪಡೆದಂತಹ ರಾಜಧನ ಎಷ್ಟು ಎಂದು ಕೂಡ ಹೇಳಿದ್ದೇನೆ. ಸನ್ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಸನ್ಮಾನ್ಯ ಸದಸ್ಯರು ಇದರಲ್ಲಿ ವಂಚನೆ ಎಷ್ಟು ಆಗಿದೆ. ವಸೂಲಾತಿ ಎಷ್ಟು ಆಗಿದೆ ಎಂದು ಕೇಳಿದ್ದಾರೆ. ಆ ಫಿಗರ್ಸ್ ನನ್ನ ಹತ್ತಿರ ಇಲ್ಲ ಪ್ರಶ್ನೆ ತಾವು ಕೇಳಿದ್ದು. ಸರ್ಕಾರಕ್ಕೆ ರಾಜಧನ ವಂಚನೆ ಆಗಿರುವುದು ತಿಳಿದಿದೆಯೇ ಎಂದು. ಗಮನಕ್ಕೆ ಬಂದಿದೆ ಎಂದು ಹೇಳಿದ್ದೇವೆ. ಆದರೆ ಕ್ವಾಂಟಿಫೈ ಮಾಡಲಿಕ್ಕೆ ಆದರಲ್ಲಿ ವಂಚನೆ ಆಗಿದೆ ಎಂದು ಯಾವಾಗ ಆಗಬೇಕು, ಇಲ್ಲೀಗಲ್ ಆಗಿರಬೇಕು. ಇಲ್ಲೀಗಲ್ ಆಗಿದೆ ಎಂದು ನಾವು ಎಲ್ಲೆಲ್ಲಿ ರೈಡ್ ಮಾಡಿದ್ದೇವೆ ಹಾಗೂ ಎಲೆಲ್ಲಿ ಸ್ವಾಧೀನ ಮಾಡಿದ್ದೇವೆ, That can be considered as evasion. ಆದರೆ ಸನ್ಮಾನ್ಯ ಸದಸ್ಯರ ಗಮನದಲ್ಲಿ ಹೇಗೆ ಇದೆ ಅಂದರೆ ಪಟ್ಟಾ ಲ್ಯಾಂಡ್‌ನಲ್ಲಿ ಯಾರು ಕ್ವಾರಿ ಮಾಡಿ ಅದನ್ನು ಎಕ್ಸ್‌ಪೋರ್ಟ್ ಮಾಡಿದ್ದಾರೆ ಈ ಬಾಬ್ತಿನಲ್ಲಿ ಎಷ್ಟು ವಂಚನೆ ಆಗಿದೆ ಎಂದು ಹೇಳತಕ್ಕದ್ದು ; Perhaps that Con't be quantified.

ಶ್ರೀ ಟಿ. ಬಿ. ಜಯಚಂದ್ರ.—ಮಂಗಳೂರು ಬಂದರಿನ ಮಾಹಿತಿ ಪ್ರಕಾರ ೧೯೮೮–೮೯ನೇ ಸಾಲಿನಲ್ಲಿ ೧೪ ಲಕ್ಷ ೭೦ ಸಾವಿರ ಟನ್ ಎಕ್ಸ್‌ಪೋರ್ಟ್ ಆಗಿದೆ ಒಂದು ಟನ್‌ಗೆ ನಿಮಗೆ ರಾಯಲ್ಟಿ ಎಷ್ಟು ಕೊಡಬೇಕೆಂದು ಲೆಕ್ಕ ಹಾಕಿದರೆ ಎಷ್ಟು ಹಣ ಮೋಸ ಆಗಿದೆ ಹಾಗೂ ಎಷ್ಟು ರಿಯಲೈಸ್ ಆಗಿದೆ ಎಂದು ಗೊತ್ತಾಗುತ್ತದೆ. ಇಲ್ಲಿ ನೀವು ಅಪರ್ಚೂಂಟ್ ಅನ್ನು ಮೆನ್‌ಷನ್ ಮಾಡಿಲ್ಲ. ಯಾಕೆಂದರೆ, ಅಮೌಂಟ್ ಅನ್ನು ಮೆನ್‌ಷನ್ ಮಾಡಿದರೆ ನಾಳೆ ಅದು ಪತ್ರಿಕೆಯಲ್ಲಿ ಬರುತ್ತದೆ, ಅವರಿಗೆಲ್ಲಾ ಗಾಭರಿ ಆಗುತ್ತದೆ ಎನ್ನುವ ದೃಷ್ಟಿ ನಿಮ್ಮ ಅಧಿಕಾರಿಗಳಿಗೆ ಇರಬಹುದು.

ಅಧ್ಯಕ್ಷರು.—ನೀವು ಪ್ರಶ್ನೆ ಕೇಳಿರತಕ್ಕದ್ದು 'quantum of the said granite' ಎಂದು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅದರ ಮೊಬಲಗು ಕೇಳಿದ್ದರೆ ಅದನ್ನು ಸೇರಿಸಿ ಕೊಡುತ್ತಿದ್ದರು.

SRI T. B. JAYACHANDRA.—It is true I had asked for the quantum of the said granite, but he has to mention about the value also.

ಅಧ್ಯಕ್ಷರು.—ನೀವು ವ್ಯಾಲ್ಯು ಕೇಳಿದ್ದೀರ.

ಶ್ರೀ ಟಿ. ಬಿ. ಜಯಚಂದ್ರ.—ವ್ಯಾಲ್ಯು ಹಾಕಿಲ್ಲ.

ಅಧ್ಯಕ್ಷರು.—ನೀವು ವ್ಯಾಲ್ಯು ಕೇಳಿಲ್ಲ. ಮತ್ತೆ ಪ್ರಶ್ನೆ ಬಹಳ ಚೆನ್ನಾಗಿದೆ ಎಂದು ಹೇಗೆ ಹೇಳಿದ್ದೀರಿ.

ಶ್ರೀ ಟಿ. ಬಿ. ಜಯಚಂದ್ರ.—ಸರ್ಕಾರದ ದೃಷ್ಟಿಯಿಂದ ಸರ್ಕಾರಕ್ಕೆ ಸಹಾಯ ಆಗಲಿ ಎಂಬ ದೃಷ್ಟಿಯಿಂದ ನಾನು ಕೇಳಿರುವ ಪ್ರಶ್ನೆ ಇದು.

MR. SPEAKER.—No.

ಶ್ರೀ ಟಿ. ಬಿ. ಜಯಚಂದ್ರ.—ಮಂಗಳೂರಿನಲ್ಲಿ ೧೪ ಲಕ್ಷ ಟನ್ ಎಕ್ಸ್‌ಪೋರ್ಟ್ ಆಯಿತು ಎಂಬ ಮಾತನ್ನು ಹೇಳಬೇಕಾದರೆ. ಅವರ್‌ಕೌಂಟ್ ಎಷ್ಟು ಲಾಸ್ ಆಗಿದೆ, ಎಷ್ಟಿಂದ ಎಷ್ಟು ಲಾಸ್ ಆಗುತ್ತದೆ ಎಂಬ ಪ್ರಶ್ನೆ ಇರುವುದರಿಂದ ಅದನ್ನು ಹೇಳಬೇಕಾಗಿತ್ತು.

ಅಧ್ಯಕ್ಷರು.—ಮುಂದಿನದು ಖಾಲಿ ಇದೆ.

ಶ್ರೀ ಟಿ. ಬಿ. ಜಯಚಂದ್ರ.—ಈಗಲೂ ಕೂಡ ಮಾನ್ಯ ಸಚಿವರು ಆಶ್ವಾಸನೆ ಕೊಡಲಿ. ಎಷ್ಟು ಮೋಸ ಆಗಿದೆ ಎಂದು ಸಾಯಂಕಾಲದ ಹೊತ್ತಿಗಾದರೂ ತರಿಸಿಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರ ಆಂಟಿದ್ದೇವೆ. ಈಗ ಇಲ್ಲಿ ಪ್ರಶ್ನೆ ಮಂಗಳೂರು ಬಂದರಿನಿಂದ ಏನೆಲ್ಲ ರಫ್ತು ಆಗಿದೆ ಎಂಬ ಬಗ್ಗೆ ಇದೆ. ಬದಕ್ಕೆ ಉತ್ತರದಲ್ಲಿ ಇದೆ. ಮಂಗಳೂರು ಬಂದರಿನಿಂದ ಏನು ಎಕ್ಸ್‌ಪೋರ್ಟ್ ಆಗುತ್ತದೆ, ಅದರಲ್ಲಿ ಆರೀ ಕರ್ನಾಟಕಕ್ಕೆ ಸೇರಿದ್ದು ಮಾತ್ರ ರಫ್ತು ಆಗುವುದಲ್ಲ ತಮಿಳುನಾಡಿಗೆ ಸೇರಿದ್ದು ರಫ್ತು ಆಗುತ್ತಿದೆ, ಸೆಂಧ್ರ ಪ್ರದೇಶಕ್ಕೆ ಸೇರಿದ್ದೂ ಕೂಡ ಮಂಗಳೂರು ಬಂದರಿನಿಂದ ರಫ್ತು ಆಗುತ್ತದೆ. ಅದೂ ಸಹ ಸೇರಿದೆ. ಆದ್ದರಿಂದ ಇವೊತ್ತು, ತಮಿಳುನಾಡಿನಲ್ಲಿ ರೆವಿನ್ಯೂ ಎಷ್ಟು ಬರುತ್ತದೆ ಎಂದು ನಮಗೆ ಲೆಕ್ಕ ಸಿಗುವುದಿಲ್ಲ. ಆಂಧ್ರ ಪ್ರದೇಶದಲ್ಲಿ ಎಷ್ಟು ರೆವಿನ್ಯೂ ರಿಯಲೈಸ್ ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಾಗುವುದಿಲ್ಲ. This is only figures with regard to exports which consists of products from Karnataka, Andhra Pradesh and Tamilnadu. ಕೊನೆ ಕ್ವೊಶ್ಚನ್‌ನಲ್ಲಿ ಆಂಧ್ರ, ತಮಿಳುನಾಡು, ಕರ್ನಾಟಕ ಎಲ್ಲಾ ಸೇರಿ ಎಕ್ಸ್‌ಪೋರ್ಟ್ಸ್ ಅನ್ನು ನಾವು ಅನಲೈಸ್ ಮಾಡಬೇಕು. ಅದರಲ್ಲಿ ತಮಿಳುನಾಡಿದ್ದು ಎಷ್ಟು, ಕರ್ನಾಟಕದ್ದು ಎಷ್ಟು ? ಆಂಧ್ರ ಪ್ರದೇಶದ್ದು ಎಷ್ಟು ? ಅದರಲ್ಲಿ ಪಟ್ಟಾ ಲ್ಯಾಂಡ್‌ನಿಂದ ಎಷ್ಟು ಹೋಗಿದೆ, ಎಷ್ಟು ಲೀಸ್ ಲ್ಯಾಂಡ್ ನಿಂದ ಹೋಗಿದೆ, ಎಷ್ಟು ಲೀಸ್ ತೆಗೆದುಕೊಳ್ಳದೇ ಹೋಗಿದೆ ಎಂದು how can I quantify because these are products of 3 States. We have to analyse all these things. Better let the hon'ble Member puts a separate question.

ಶ್ರೀ ಟಿ. ಬಿ. ಜಯಚಂದ್ರ.—ಕೊನೆಯ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಶ್ರೀ ಕಾಗೋಡು ತಿಮ್ಮಪ್ಪ

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಪಟ್ಟಾದಾರರು ಆ ಭೂಮಿಯಲ್ಲಿರತಕ್ಕ ಕಲ್ಲನ್ನು ತೆಗೆಯಬೇಕು ಎನ್ನತಕ್ಕದ್ದಕ್ಕೆ ಹೈಕೋರ್ಟ್‌ಆದೇಶ ಇದೆ ಎಂದು ಮಾನ್ಯ ಸಚಿವರು ಹೇಳಿದರು. ಒಂದು ಸಂಶಯ ನನಗೆ ಬರುತ್ತದೆ. ಎಲ್ಲಾ ಪಟ್ಟಾ ಭೂಮಿಗಳು ಕೂಡ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಕಾನೂನು ಪ್ರಕಾರ ಈಗ ಇರತಕ್ಕ ಎಲ್ಲಾ ಪಟ್ಟಾ ಭೂಮಿಯನ್ನು ಕೊಟ್ಟಿರತಕ್ಕದ್ದು ಮತ್ತು ಅವರಿಗೆ ಹಕ್ಕು ಭಾದ್ಯತೆ ಇರತಕ್ಕದ್ದು ಕೃಷಿಗೆ ಮಾತ್ರ. ಆ ಭೂಮಿಯನ್ನು ಕೃಷಿಯೇತರಕ್ಕೆ ಬಳಸಬೇಕಾದರೆ ಪುನಃ ಸರ್ಕಾರದ ಅನುಮತಿ ಪಡೆಯಬೇಕು. ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಹಾಗಿದೆ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಿ ನೋಡಲಿ ಯಾವುದೇ ಕೃಷಿ ಭೂಮಿಯಲ್ಲಿ ಖನಿಜ ಸಂಪತ್ತು ಇರಲಿ, ಬಂಗಾರ ಇರಲಿ, ಚಿನ್ನ ಇರಲಿ ಏನೇ ಇದ್ದರೂ ಕೂಡ ಅದು ಸರ್ಕಾರಕ್ಕೆ ಸೇರಿದ್ದು.

ಅದರ ಮೇಲೆ ಯಾವ ಪಟ್ಟಾದಾರನಿಗೂ ಹಕ್ಕಿಲ್ಲ ಭೂಮಿಯ ಮೇಲೆ ಕೃಷಿಗೆ ಮಾತ್ರ ಹಕ್ಕಿದೆಯೇ ವಿನಃ ಅದರಲ್ಲಿರತಕ್ಕ ಖನಿಜ ಸಂಪತ್ತಿನ ಮೇಲೆ ಹಕ್ಕಿಲ್ಲ. ಹಾಗೆ ಹಕ್ಕಿದೆ ಎನ್ನುವಂಥ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಹೋದರೆ ನಾಳೆ ಅಲ್ಲಿರತಕ್ಕಂಥ ಗಂಧಕ್ಕೂ ಹಕ್ಕು ಕೊಡಬೇಕಾಗುತ್ತದೆ, ಖನಿಜ ಸಂಪತ್ತಿಗೂ ಹಕ್ಕು ಕೊಡಬೇಕಾಗುತ್ತದೆ. ಆದ್ದರಿಂದ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಪಟ್ಟಾದಾರರಿಗೆ

ಇರತಕ್ಕಂಥ ಹಕ್ಕು ಏನು ಮತ್ತು ಖನಿಜ ಸಂಪತ್ತಿನ ಮೇಲೆ ಅವರಿಗೆ ಹಕ್ಕು ಇದೆಯೋ ಇಲ್ಲವೊ ಎನ್ನುವುದನ್ನೆ ದಯವಿಟ್ಟು ಪರಿಶೀಲನೆ ಮಾಡಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ಇದು ಪರಿಶೀಲನೆಗೆ ಬೇಕಾಗೇ ಇಲ್ಲ. ಏಕೆಂದರೆ, ಖನಿಜ ಸಂಪತ್ತು ಸರ್ಕಾರಕ್ಕೆ ಸೇರಿದ್ದು. It does not belong to the pattedars. They should also take licence and royalty which will have to be paid by them. Law is very clear, But this has to be interpreted by the Hon'ble High Court. ಆದರೆ ೧೬೦ ಪಟ್ಟಾದಾರರು ಹೈಕೋರ್ಟಿಗೆ ಅರ್ಜಿ ಹಾಕಿ they got a stay. That is our problem. ಮತ್ತೊಂದು ಕೇಸ್‌ನಲ್ಲಿ ನಾವು ಸುಪ್ರೀಂಕೋರ್ಟ್‌ಗೆ ತೆಗೆದುಕೊಂಡು ಹೋದಾಗ ಅಲ್ಲಿ ಸ್ಪಷ್ಟವಾದಂಥ ತೀರ್ಪು ಸಿಗಲಿಲ್ಲ. ಆದ್ದರಿಂದ ನಾನು ಮೊದಲೇ ಉತ್ತರ ಕೊಡುವಾಗ ಹೇಳಿದೆ.

SRI KAGODU THIMMAPPA.— Let the Hon'ble Minister place a copy of the judgement. What is the judgement ?

MR. SPEAKER.— Copies are there in the file. How can you expect a copy.

SRI KAGODU THIMMAPPA.— What is the judgement, I want to know.

MR. SPEAKER.—You can ask for half-an-hour discussion. I will allow it.

ಜಾತಿಯಂನ್ನು ಸೇರಿಸಂವ ಕುರಿತಂ

೧೪೦೯ ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿರುವ ಜಾತಿಗಳೆಷ್ಟು ? ಉಪ ಜಾತಿಗಳ ಹೆಸರು ಸಮೇತ ವಿವರ ತಿಳಿಸುವುದು

ಆ) ನಾಯರಿ ಎಂಬ ಜಾತಿ ಪಟ್ಟಿಯಲ್ಲಿ ಬಿಟ್ಟುಹೋಗಿರುವುದೇ ?

ಇ) ಹಾಗಿದ್ದರೆ ಕಾರಣವೇನು ?

ಈ) ಬಿಟ್ಟುಹೋದ ಜಾತಿಗಳನ್ನು ಪಟ್ಟಿಗೆ ಯಾವಾಗ ಸೇರಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ).—

ಅ) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ ಎಲ್ ೬೬ ಬಿಸಿಎ ೮೬ ರ ದಿನಾಂಕ ೧೩-೧೦-೮೬ ರಲ್ಲಿ ಭಾರತ ಸಂವಿಧಾನದ ೧೫(೪) ಮತ್ತು ೧೬(೪)ರ ಮೇರೆಗೆ ಹಿಂದುಳಿದ ವರ್ಗಗಳೆಂದು ಕೆಲವು ಜಾತಿ ಮತ್ತು ಪರ್ಯಾಯ ಜಾತಿಗಳನ್ನು ಗುರುತಿಸಿರುವರು. ಅವುಗಳ ವಿವರ ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಹಿಂದುಳಿದ ವರ್ಗಗಳು	ಅನುಚ್ಛೇದ ೧೫(೪)	ಅನುಚ್ಛೇದ ೧೬(೪)
೧.	ಗ್ರೂಪ್—ಎ	೬೧	೬೧
೨.	ಗ್ರೂಪ್—ಬಿ	೧೩೮	೧೧೯
೩.	ಗ್ರೂಪ್—ಸಿ	೭	೭
೪.	ಗ್ರೂಪ್—ಡಿ	೭	೧೬
	ಒಟ್ಟು: —	೨೧೩	೨೦೩